**ದಿಃ13.06.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲುಃ 4, 5 , 19 ರಿಂದ 21 ನೇ ಪ್ರತಿವಾದಿ ಪರ ಶ್ರೀ ಎಂ.ಎನ್.ಎಸ್ ವಕೀಲರಿಂದಃ**

ಸುಳ್ಯದ ಆಲಟ್ಟಿ ಗ್ರಾಮದ ಸರ್ವೆ ನಂ.54/1 ರಲ್ಲಿ ಇರುವ ಕಟ್ಟಡ ಮತ್ತು ಜಾಗ ಇದೆ, ಸರ್ವೆ ನಂ.336/5 ಮತ್ತು 326/4 ರಲ್ಲಿ ಜಾಗ ಇದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದಿರುತ್ತಾರೆ. ನಾನು ಸುಳ್ಯದ ಆಲಟ್ಟಿ ಗ್ರಾಮದ ಇದೆ ಸರ್ವೇ ನಂಬರಿನಲ್ಲಿ ವಾಸ ಇದ್ದೇನೆ ಎಂದರೆ ಸರಿಯಲ್ಲ. ನಾನು ಆಲಟ್ಟಿ ಗ್ರಾಮದಲ್ಲಿ ವಾಸಸಿದ್ದೇನೆ. ನೀವು ವಾಸವಿರುವ ಜಾಗದ ಸರ್ವೆ ನಂಬರ್ ಎಷ್ಟು ಎಂದರೆ ಸಾಕ್ಷಿ ನೆನಪಿಲ್ಲ ಎನ್ನುತ್ತಾರೆ. ಆಲಟ್ಟಿ ಗ್ರಾಮದಲ್ಲಿ ಇರುವ ಸರ್ವೆ ನಂ,54/1, 336/5 ಮುತ್ತ 326/4 ರಲ್ಲಿ ಇರುವ ಆಸ್ತಿಯನ್ನು ಹೊರತು ಪಡಿಸಿ ಬೇರೆ ಸರ್ವೆ ನಂಬರಲ್ಲಿ ನಿಮಗೆ ಆಸ್ತಿ ಇದೆ ಎಂದರೆ ಸಾಕ್ಷಿ ನಾನು ದೂಡ್ಡಯ್ಯ ಎಂಬುವವರಿಂದ ಆಸ್ತಿ ಖರೀದಿ ಮಾಡಿದ್ದು ಸದರಿ ಆಸ್ತಿ ಇದೆ ಎನ್ನುತ್ತಾರೆ. ದೊಡ್ಡಯ್ಯ ಈತ ನನ್ನ ಚಿಕ್ಕಪ್ಪ. ದೊಡ್ಡಯ್ಯ ಈತನಿಂದ ಆಸ್ತಿ ಖರೀದಿ ಮಾಡಿದ ಸಂಬಂಧ ನನ್ನ ಬಳಿ ಖರೀದಿ ಪತ್ರ ಇದೆ. ಸದರಿ ಕ್ರಯ ಪತ್ರದ ಆದಾರದ ಮೇಲೆ ನನ್ನ ಹೆಸರಿಗೆ ಆಸ್ತಿಗೆ ಖಾತಾ ವರ್ಗಾವಣೆ ಆಗಿದೆ. ಸದರಿ ಕ್ರಯ ಪತ್ರ ಮತ್ತು ಕಂದಾಯ ದಾಖಲೆಗಳನ್ನು ನ್ಯಾಯಾಲಯದ ಮುಂದೆ ಹಾಜರು ಮಾಡಲು ನನಗೇನೂ ಅಭ್ಯಂತರ ಇಲ್ಲ. ಸುಳ್ಳದ ಆಲಟ್ಟಿ ಗ್ರಾಮದ ಸರ್ವೆ ನಂ,54/1, 336/5 ಮತ್ತು 326/4 ಆಸ್ತಿ ಸಂಬಂಧ ನನ್ನ ಚಿಕ್ಕಪ್ಪರಿಂದಾದ ದೊಡ್ಡಯ್ಯ ಮತ್ತು ಜೋಯಪ್ಪ ಇವರು ಸುಳ್ಯದ ದಿವಾಣಿ ನ್ಯಾಯಾಲಯದಲ್ಲಿ 1989 ರಲ್ಲಿ ದಾವೆ ಹೂಡಿದಿದ್ದರು ಎಂದರೆ ಸರಿಯಲ್ಲ. ನನ್ನ ಮತ್ತು ನನ್ನ ಸಹೋದರನ ವಿರುದ್ದ ಸುಳ್ಯ ನ್ಯಾಯಾಲಯದಲ್ಲಿ ಯಾವುದೇ ದಾವೆ ದಾಖಲಾಗಿಲ್ಲ. ಸುಳ್ಯದ ಬಿ.ವೆಂಕಪ್ಪಗೌಡ ವಕೀಲರು ನನಗೆ ಗೊತ್ತಿಲ್ಲ. ನನ್ನ ವಿರುದ್ದ ಸುಳ್ಯ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆಃ42/1989 ರ ದಾವೆಯನ್ನು ನನ್ನ ಚಿಕ್ಕಪ್ಪಂದಿರಾದ ದೂಡ್ಡಯ್ಯ ಮತ್ತು ಜೋಯಪ್ಪರವರು ದಾವೆ ಹೂಡಿದ್ದರು ಆ ವಿಚಾರ ನನಗೆ ಗೊತ್ತಿದ್ದರು ನ್ಯಾಯಾಯದ ಮುಂದೆ ಸುಳ್ಳು ಸಾಕ್ಷ್ಯ ನುಡಿದಿದ್ದೇನೆ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ನನ್ನ ಮತ್ತು ನನ್ನ ಸಹೋದರ ಪರವಾಗಿ ಬಿ.ವೆಂಕಪ್ಪ ಗೌಡ ಎಂಬ ವಕೀಲರು ಹಾಜರಾಗಿದ್ದರು ಎಂರೆ ಸಾಕ್ಷಿ ನನಗೆ ಗುತ್ತಿಲ್ಲ

ಎಂದಿರುತ್ತಾರೆ. ಸದರಿ ದಾವೆಯಲ್ಲಿ ನನ್ನ ಮತ್ತು ನನ್ನ ಇತರ ಸಹೋದರರ ಪರವಾಗಿ ನನ್ನ ಸಹೋದರ ಅರವಿಂದ್ ಸಾಕ್ಷಿ ನುಡಿದಿದ್ದ ಎಂದರೆ ಗೊತ್ತಿಲ್ಲ. ಅರವಿಂದ್ ನನ್ನ ಸಹೋದರ ಎಂದರೆ ಸರಿ. ಸುಳ್ಯ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ:42/1989 ರ ದಾವೆಯಲ್ಲಿ ನನ್ನ ಮತ್ತು ನನ್ನ ಸಹೋದರರ ನಿಲುವು ಒಂದೆ ಆಗಿತ್ತು ಎಂದರೆ ಸರಿಯಲ್ಲ. ಅಸಲು ದಾವಾ ಸಂಖ್ಯೆ:42/1989 ರಲ್ಲಿ ಹೊರಡಿಸಿರುವ ತೀರ್ಪು ಮತ್ತು ಡಿಕ್ರಿಯನ್ನು ನಾನು ಈ ಹಿಂದೆ ನೋಡಿಲ್ಲ. ಸದರಿ ದಾವೆಯಲ್ಲಿ ನನ್ನ ಸಹೋದರ ಅರವಿಂದ್ ಕೊಟ್ಟಿರುವ ಸಾಕ್ಷಿ ಹೇಳಿಕೆಯನ್ನು ನಾನು ನೋಡಿಲ್ಲ. ಅಸಲು ದಾವಾ ಸಂಖ್ಯೆ:42/1989 ರ ದಾವೆಯ ಸಂಬಂಧ ಸಂಪೂರ್ಣ ಮಾಹಿತಿ ಇದ್ದರು ಮತ್ತು ಅದರಲ್ಲಿ ನನ್ನ ಸಹೋದರ ಅರವಿಂದ್ ಸಾಕ್ಷಿ ನುಡಿದಿರುವ ವಿಚಾರ ಗೊತ್ತಿದ್ದರೂ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿದಿದ್ದೇನೆ ಎಂದರೆ ಸರಿಯಲ್ಲ. ಈ ದಾವೆಯ ದಾವಾ ಸ್ವತ್ತುಗಳು ನನ್ನ ಮತ್ತು ಇತರ ವಾದಿಗಳು ಹಾಗೂ ಪ್ರತಿವಾದಿಗಳ ಜಂಟಿ ಸ್ವಾಧೀನದಲ್ಲಿ ಇದೆ ಎಂದು ಸುಳ್ಳು ಸಾಕ್ಷ್ಯ ನುಡಿದಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಹೋದರ ಅರವಿಂದ್ ಅಸಲು ದಾವಾ ಸಂಖ್ಯೆ:42/1989 ರ ದಾವೆಯಲ್ಲಿ ಸಾಕ್ಷಿ ನುಡಿದ ಕಾಲಕ್ಕೆ ಗಾಳಿಬೀಡು ಗ್ರಾಮದ ಆಸ್ತಿಗಳನ್ನು ಆ ದಾವೆಯ ಒಂದನೇ ವಾದಿ ಮತ್ತು 4ನೇ ಪ್ರತಿವಾದಿನಯ ಹಿಸ್ಸೆಗೆ ಕೊಡಲಾಗಿದೆ ಎಂದು ಸಾಕ್ಷಿ ನುಡಿದಿದ್ದಾರೆ ಎಂದರೆ ಸರಿಯಲ್ಲ. ಈ ಎಲ್ಲಾ ವಿಚಾರ ಗೊತ್ತಿದ್ದರು ನಾನು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿದಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

ಸಹಿ/-
(ಸಿ ವೀರಭದ್ರಯ್ಯ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಕೊಡಗು, ಮಡಿಕೇರಿ.